# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

**ಕೇಂದ್ರ ಕಛೇರಿ : ಬೆಂಗಳೂರು-27.**

**ಸಂಚಾರ ಇಲಾಖೆ**

**ಸಂ:ಕರಾಸಾ/ಕೇಕ/ಸಂ/ಸಾ/ಕಾ/ಕೋವಿಡ್-19/ 366 /21-22** **ದಿನಾಂಕ: 20/06/2021**

ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು,
ಕರಾರಸಾರಿಗೆ ನಿಗಮ.

ಮಾನ್ಯರೆ,

ವಿಷಯ: ಕೋವಿಡ್-19 ಸೋಂಕಿನ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಜಾರಿಗೊಳಿಸಿರುವ ಮಾರ್ಗಸೂಚಿಗಳನ್ನು ಸಡಿಲಗೊಳಿಸಿರುವ ಹಿನ್ನೆಲೆಯಲ್ಲಿ ಸಾರಿಗೆ ಕಾರ್ಯಾಚರಣೆಗೆ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ.

ಉಲ್ಲೇಖ: ಸಂ. ಆರ್‌ಡಿ 158 ಟಿಎನ್‌ಆರ್ 2020 ದಿನಾಂಕ 19.06.2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-19 ಹರುಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಜಾರಿಗೊಳಿಸಿದ್ದ ಮಾರ್ಗಸೂಚಿಗಳಲ್ಲಿ ಹಲವು ನಿರ್ಬಂಧಗಳನ್ನು ದಿನಾಂಕ 21.06.2021 ರಿಂದ ಜಾರಿಗೆ ಬರುವಂತೆ ಸಡಿಲಗೊಳಿಸಲಾಗಿದ್ದು, ನಿಗಮದ ಸಾರಿಗೆ ಕಾರ್ಯಾಚರಣೆಗೆ ಅನುಮತಿ ನೀಡಲಾಗಿದೆ. ಸದರಿ ಆದೇಶದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ, ಸದರಿ ಆದೇಶವು ಸ್ವಯಂವೇದ್ಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖಿತ ಆದೇಶದಲ್ಲಿ ತಿಳಿಸಿರುವಂತೆ, ಸಾರಿಗೆ ಕಾರ್ಯಾಚರಣೆಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದು.

1. ದಿನಾಂಕ 21.06.2021ರ ಬೆಳಗ್ಗೆ 06.00 ಗಂಟೆಯಿಂದ ಸಾರಿಗೆ ಕಾರ್ಯಾಚರಣೆಯನ್ನು ಪ್ರಾರಂಭಿಸುವುದು.
2. ಬಸ್ಸುಗಳ ಆಸನ ಸಾಮರ್ಥ್ಯದ ಶೇಕಡ 50ರಷ್ಟು ಪ್ರಯಾಣಿಕರು ಮಾತ್ರ ಪ್ರಯಾಣಿಸಲು ಅನುಮತಿಸುವುದು. ಅಂದರೆ, 3 ಆಸನಗಳಿರುವ ಸಾಲಿನಲ್ಲಿ 2 ಪ್ರಯಾಣಿಕರು(ಮಧ್ಯೆಯಿರುವ ಆಸನವನ್ನು ಖಾಲಿ ಬಿಡುವುದು) ಹಾಗೂ 2 ಆಸನಗಳಿರುವ ಸಾಲಿನಲ್ಲಿ 1 ಪ್ರಯಾಣಿಕ(ಕಿಟಕಿ ಬಳಿಯ ಆಸನ) ಪ್ರಯಾಣಿಸಲು ಅನುವು ಮಾಡುವುದು.
3. ಉಲ್ಲೇಖಿತ ಆದೇಶದಲ್ಲಿ ಪ್ರತಿನಿತ್ಯ ರಾತ್ರಿ ಸಮಯ ಹಾಗೂ ವಾರಾಂತ್ಯ ದಿನಗಳಂದು ಕರ್ಫ್ಯೂ ಜಾರಿಗೊಳಿಸಲಾಗಿದೆ. ಸದರಿ ಸಮಯದಲ್ಲಿ ಸಹ ಸಾರಿಗೆ ಕಾರ್ಯಾಚರಣೆಗೆ ನಿರ್ಬಂಧವಿರುವುದಿಲ್ಲ. ಆದರೆ ಸದರಿ ಅವಧಿಯಲ್ಲಿ ಜನಸಂದಣಿ ವಿರಳವಾಗಿರುವ ಸಾಧ್ಯತೆಯಿರುವುದರಿಂದ ಜನಸಂದಣಿಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುವುದು.
4. Category-Iರಲ್ಲಿ ಇರುವ ಜಿಲ್ಲೆಗಳಲ್ಲಿ (ಬೆಂಗಳೂರು ನಗರ, ರಾಮನಗರ, ತುಮಕೂರು, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ) ಅವಶ್ಯಕತೆಗೆ ಅನುಗುಣವಾಗಿ ಸ್ಥಳೀಯ/ದೂರ ಮಾರ್ಗದ ಮತ್ತು ಅಂತರ ಜಿಲ್ಲಾ ಸಾರಿಗೆಗಳನ್ನು ಒಳಗೊಂಡಂತೆ ಸಾರಿಗೆ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳುವುದು.
5. Category-II ರಲ್ಲಿ ಇರುವ ಜಿಲ್ಲೆಗಳಲ್ಲಿ (ಹಾಸನ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಕೊಡಗು, ಚಿತ್ರದುರ್ಗ) ಭಾಗಶಃ ಲಾಕ್‌ಡೌನ್ ಇರುವುದರಿಂದ ಮತ್ತು ವಾಣಿಜ್ಯ ವಹಿವಾಟು ಹಾಗೂ ಸಾರ್ವಜನಿಕರ ಓಡಾಟಕ್ಕೆ ವೇಳಾ ನಿರ್ಬಂಧ ಇರುವುದರಿಂದ ಸಾರಿಗೆಗಳ ಕಾರ್ಯಾಚರಣೆ ಸಮಯವನ್ನು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಸೂಕ್ತವಾಗಿ ನಿಗದಿಪಡಿಸಿಕೊಂಡು ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ಅವಶ್ಯವಿರುವಷ್ಟು ಸಂಖ್ಯೆಯ ಸ್ಥಳೀಯ/ಅಂತರ ಜಿಲ್ಲಾ ದೂರ ಮಾರ್ಗದ ಸಾರಿಗೆಗಳು/ಸುತ್ತುವಳಿಗಳನ್ನು ಕಾರ್ಯಾಚರಿಸುವುದು.
6. Category-III ರಲ್ಲಿ ಇರುವ ಮೈಸೂರು ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದ ಲಾಕ್‌ಡೌನ್ ಇರುವುದರಿಂದ ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಗ್ರಾಮಾಂತರ ಹಾಗೂ ನಗರ ಸಾರಿಗೆ ಘಟಕಗಳಿಂದ ಸಾರಿಗೆಗಳ ಕಾರ್ಯಾಚರಣೆಗೆ ಅವಕಾಶವಿರುವುದಿಲ್ಲ. ಅದರಂತೆ ಕ್ರಮವಹಿಸುವುದು.

Scanned with CamScanner

7. ಮೈಸೂರು ಜಿಲ್ಲೆ ಮುಖೇನ ವಿವಿಧ ಸ್ಥಳಗಳಿಗೆ ಕಾರ್ಯಾಚರಣೆ ಮಾಡುವ ದೂರ ಮಾರ್ಗದ ಸಾರಿಗೆಗಳಲ್ಲಿ ಮೈಸೂರು ಜಿಲ್ಲಾ ವ್ಯಾಪ್ತಿಯ ಬಸ್ ನಿಲ್ದಾಣಗಳಿಂದ ಯಾವುದೇ ಪ್ರಯಾಣಿಕರನ್ನು ಹತ್ತಿಸಿ/ಇಳಿಸಲು ಅವಕಾಶವಿರುವುದಿಲ್ಲ. ಅದರಂತೆ ದೂರ ಮಾರ್ಗದ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುವುದು.
8. ವಿವಿಧ ಸ್ಥಳಗಳಿಂದ ಮೈಸೂರು ಜಿಲ್ಲಾ ವ್ಯಾಪ್ತಿಯ ಸ್ಥಳಗಳಿಗೆ ನಿಗಮದ ಸಾರಿಗೆಗಳನ್ನು ಕಾರ್ಯಾಚರಿಸಲು ಅವಕಾಶವಿರುವುದಿಲ್ಲ.
9. ಅಂತರರಾಜ್ಯ ಸಾರಿಗೆಗಳ ಕಾರ್ಯಾಚರಣೆಯ ಬಗ್ಗೆ ಮುಂದಿನ ದಿನಗಳಲ್ಲಿ ಪ್ರತ್ಯೇಕವಾಗಿ ತಿಳಿಸಲಾಗುವುದು.

ಮೇಲಿನ ನಿರ್ದೇಶನಗಳು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ. ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ಅನುಸರಣಾ ವರದಿ ಕಳುಹಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ)

ಅಡಕ: ಮೇಲ್ಕಂಡಂತೆ.

Scanned with CamScanner